# ಶುಭವಾರ್ತೆ

ಉಚಿತ ಹಂಚಿಕೆ

ಸಂಪುಟ 2 ಸಂಚಿಕೆ 17


> ಆದರೆ ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ. ಆಮೇಲೆ ಆಶೆಯು ಬಸುರಾಗಿ ಪಾಪವನ್ನು ಹೆರುತ್ತದೆ, ಪಾಪವು ಬೆಳೆದು ಮರಣವನ್ನು ಹಡೆಯುತ್ತದೆ. —ಯಾಕೋಬ 1:15

## ಸರ್ಪವು - ಸ್ತ್ರೀಯು ಒಂದು ಸಂಕೇತವಾಗಿ

**ಸರ್ಪವು ಒಂದು ಸಂಕೇತವಾಗಿ**

ಸತ್ಯವೇದದ ಮೊದಲನೇ ಪುಸ್ತಕವಾದ ಆದಿಕಾಂಡದ ಪ್ರಥಮ ಕೆಲವು ಅಧ್ಯಾಯಗಳನ್ನು ಓದುವಾಗ, ಕೆಲವರಿಗೆ ಅದು ಸ್ವಲ್ಪ ಭಿನ್ನವಾಗಿ ತೋರಬಹುದು, ಆದರೆ ದೇವರು ತನ್ನ ಸೃಷ್ಟಿ ಕಾರ್ಯವನ್ನು ಹೇಗೆ ಮಾಡಿದನು, ಈ ಭೂಮಿಯ ಮೇಲೆ ಜೀವಿಗಳು ಹೇಗೆ ಅಸ್ತಿತ್ವಕ್ಕೆ ಬಂದವು ಹಾಗೂ ಮಾನವನ ಪ್ರಾರಂಭ ಹೇಗಾಯಿತು ಎಂಬುದರ ಸಂಕ್ಷಿಪ್ತ ರೂಪವನ್ನು ನಾವು ಕಾಣಬಹುದು.

ದೇವರು ಪ್ರಥಮ ಮಾನವನಾದ ಆದಾಮನನ್ನು ಸೃಷ್ಟಿಸಿ, ನಂತರ ಪ್ರಥಮ ಸ್ತ್ರೀಯಾದ ಹವ್ವಳನ್ನು ಆದಾಮನ ದೇಹದಿಂದ ಉಂಟು ಮಾಡಿ, ಅವರಿಬ್ಬರನ್ನೂ ಏದೆನ್ ತೋಟದಲ್ಲಿಟ್ಟನು ; ಅವರಿಗೆ ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣನ್ನು ತಿನ್ನಬಹುದು, ಆದರೆ ಒಂದು ಮರದ ಹಣ್ಣನ್ನು ಮಾತ್ರ ತಿನ್ನಬಾರದು, ತಿಂದರೆ ಸಾಯುವಿರಿ ಎಂದು ಅಪ್ಪಣೆ ಕೊಟ್ಟಿದ್ದನು ಎಂಬುದಾಗಿ 2ನೇ ಅಧ್ಯಾಯದಲ್ಲಿ ನಾವು ಓದುತ್ತೇವೆ, ದೇವರು ಈ ರೀತಿಯಾದ ಒಂದು ಕಟ್ಟಪ್ಪಣೆಯನ್ನು ಕೊಟ್ಟಿದ್ದರೂ ಕೂಡ ಹವ್ವಳು ಹಾಗೂ ಆದಾಮನು ದೇವರ ಅಪ್ಪಣೆಯನ್ನು ಮೀರಿ, ಆ ಹಣ್ಣನ್ನು ತಿನ್ನುತ್ತಾರೆ. (2 ಮತ್ತು 3ನೇ ಅಧ್ಯಾಯಗಳನ್ನು ಓದಿ)

ನಂತರ ದೇವರಾದ ಯೆಹೋವನು ಅವರನ್ನು ವಂಚಿಸಿದ ಸರ್ಪಕ್ಕೆ ಹೀಗೆ ಹೇಳುತ್ತಾನೆ, "ನಿನಗೂ ಈ ಸ್ತ್ರೀಗೂ ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನ

ವಿರುವ ಹಾಗೆ ಮಾಡುವೆನು, ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು. ನೀನು ಅದರ ಹಿಮ್ಮಡಿಯನ್ನು ಕಚ್ಚುವಿ.' (ಆದಿ. 3:15) ಈ ಒಂದು ಘೋಷಣೆಯನ್ನು ನಾವು ನೋಡುವಾಗ, ಸರ್ಪವು ಏನನ್ನು ಪ್ರಕಟಪಡಿಸಿತೋ ಮತ್ತು ಏನನ್ನು ಹೊರ ತಂದಿತೋ ಅದನ್ನು ಪ್ರತಿನಿಧಿಸಲು ಉಪಯೋಗಿಸಿದೆ ಎಂದು ಅರ್ಥವಾಗುತ್ತದೆ, ತಪ್ಪು ಮಾಡಲು ಮತ್ತು ಪಾಪಕ್ಕೆ ಕರೆದೊಯ್ದು ಶರೀರ ಭಾವದ ಆಲೋಚನೆಯನ್ನು ಅದು ವ್ಯಕ್ತಪಡಿಸಿ, ಅಂತ್ಯದಲ್ಲಿ ಮರಣದಲ್ಲಿ ಕೊನೆಗೊಂಡಿತು. ಆದ್ದರಿಂದ ಒಂದು ಸಂಕೇತವಾಗಿ ಪ್ರತಿಯೊಬ್ಬ ಮಾನವರಲ್ಲಿ ನೆಲೆಗೊಂಡಿರುವ ಪಾಪ ಮತ್ತು ಮರಣದ ನಿಯಮದಡಿಯಲ್ಲಿರುವ ಶರೀರ ಭಾವವನ್ನು ಅದು ಪ್ರತಿನಿಧಿಸುತ್ತದೆ. ಈ ರೀತಿಯಾಗಿ ಸಂಕೇತವಾಗಿ ಬಳಸಿರುವ ಕೆಲವು ವಚನಗಳನ್ನು ನೋಡೋಣ, "ಮೋಶೆ ತಾಮ್ರದಿಂದ ಸರ್ಪದ ಆಕಾರವನ್ನು ಮಾಡಿಸಿ, ಧ್ವಜಸ್ತಂಭದ ಮೇಲೆ ಇರಿಸಿದನು, ಸರ್ಪಗಳಿಂದ ಗಾಯಪಟ್ಟವರಲ್ಲಿ ಯಾರು ಆ ತಾಮ್ರದ ಸರ್ಪವನ್ನು ಲಕ್ಷ್ಯವಿಟ್ಟು ನೋಡಿದರೋ ಅವರೆಲ್ಲರೂ ಬದುಕಿಕೊಂಡರು," (ಅರಣ್ಯ. 21:9), ಇಲ್ಲಿ ತಾಮ್ರದ ಸರ್ಪ—ಒಂದು ನಿರ್ಜೀವ ಸರ್ಪ—ಒಂದು ಸಂಕೇತವಾಗಿ ಉಪಯೋಗಿಸಲ್ಪಟ್ಟಿದೆ. (ಅನಂತರ ಹಿಜ್ಕೀಯನು ಈ ತಾಮ್ರದ ಸರ್ಪವನ್ನು ಚೂರು ಚೂರು ಮಾಡಿದನೆಂದು ನಾವು 2 ಅರಸು 18:4ರಲ್ಲಿ ಓದುತ್ತೇವೆ.) ಪೌಲನು ಮರಣದ ಬಗ್ಗೆ ಹೇಳುವಾಗ "ಮರಣದ ಕೊಂಡಿ ಪಾಪವೆ" ಎಂದು ಹೇಳುತ್ತಾನೆ (1 ಕೊರಿಂಥ 15:56) ಇಲ್ಲಿ ಮರಣಕ್ಕೆಲ್ಲಾದರೂ ಕೊಂಡಿ ಇರುತ್ತದೆಯೇ? ಇದು ಸಾಂಕೇತವಾಗಿ ಉಪಯೋಗಿಸಿದೆ. ಹೊಸ ಒಡಂಬಡಿಕೆಯಲ್ಲಿ ಆ ತಾಮ್ರದ ಸರ್ಪದ ಬಗ್ಗೆ ಮತ್ತೆ ಉಲ್ಲೇಖಿಸಿ, ಯೋಹಾನನು ಹೀಗೆ ವಿವರಿಸುತ್ತಾನೆ, "ಮೋಶೆಯು ಅಡವಿಯಲ್ಲಿ ಆ ಸರ್ಪವನ್ನು ಎತ್ತರದಲ್ಲಿಟ್ಟ ಹಾಗೆಯೇ ಮನುಷ್ಯ ಕುಮಾರನು ತನ್ನನ್ನು ನಂಬುವವರೆಲ್ಲರೂ ನಿತ್ಯ ಜೀವನವನ್ನು ಪಡೆಯಬೇಕೆಂದು ಎತ್ತರದಲ್ಲಿಡಲ್ಪಡಬೇಕು," (ಯೋಹಾನ 3:14-15) "ಆದರೆ ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ. ಆಮೇಲೆ ಆಶೆಯು ಬಸುರಾಗಿ ಪಾಪವನ್ನು ಹೆರುತ್ತದೆ;" (ಯಾಕೋಬ 1:15). ಇಲ್ಲಿ 'ಆಶೆ', 'ಪಾಪ' ಮತ್ತು 'ಮರಣ' ಎಂಬ

ಪ್ರಕಾಶಕರು :

ದಿ ಕ್ರಿಸ್ಟಡೆಲ್ಫಿಯನ್ಸ್,
23/4, ಬೆನ್ಸನ್ ರಸ್ತೆ, ಬೆಂಗಳೂರು–560046, ಕರ್ನಾಟಕ
(ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳಿಗೆ)

ಸ್ಥಳೀಯ ಕೂಟಗಳಿಗೆ :

ದಿ ಕ್ರಿಸ್ಟಡೆಲ್ಫಿಯನ್ಸ್, ಕೇರ್ ಆಫ್ ಸಿಟಿ ಡ್ರಗ್ ಹೌಸ್, ರಾಜೇಂದ್ರ ಪ್ರಸಾದ್ ರಸ್ತೆ,
ಮಂಡ್ಯ 571401, ಕರ್ನಾಟಕ.

ಪದಗಳ ಪ್ರಯೋಗವನ್ನು ಗಮನಿಸಿ, ಅವುಗಳನ್ನು ವಾಸ್ತವಿಕವಾಗಿ ಅರ್ಥ ಮಾಡಿಕೊಳ್ಳುವುದಾದರೆ ಅಪಾರ್ಥವಾಗುತ್ತದೆ, ಅವುಗಳನ್ನು ಸಾಂಕೇತಿಕವಾಗಿ ಬಳಸಿದೆ.

ಸ್ತ್ರೀಯ ಸಂತಾನವು ಕ್ರಿಸ್ತನನ್ನು ಸೂಚಿಸಿ, ಕ್ರಿಸ್ತನು ಸರ್ಪದ ತಲೆಯನ್ನು ಜಜ್ಜಬೇಕಾದರೆ, ಏದೆನ್ ತೋಟದಲ್ಲಿ ಸ್ತ್ರೀಗೆ ವಂಚಿಸಿದ ಸರ್ಪವು ಕ್ರಿಸ್ತನ ಕಾಲದಲ್ಲಿರಬೇಕು. ಇತ್ತೇ ? ಇಲ್ಲ. ಹಾಗಿದ್ದಲ್ಲಿ ಕ್ರಿಸ್ತನು ಜಜ್ಜಿದ ಸರ್ಪ ಯಾವುದು ? ಆ ಸರ್ಪವೇ ಇಲ್ಲದಿದ್ದ ಮೇಲೆ ಕ್ರಿಸ್ತನು ಜಜ್ಜಿದ್ದೇನು ? ಅಲ್ಲದೆ ಕ್ರಿಸ್ತನು ಯಾವ ಸರ್ಪವನ್ನೂ ಹಿಡಿದದ್ದೇ ಆಗಲಿ, ಸರ್ಪವು ಆತನ ಬಳಿಗೆ ಬಂದಿದ್ದೇ ಆಗಲಿ, ಸತ್ಯವೇದದಲ್ಲಿ ನಾವು ಓದುವುದಿಲ್ಲ. ಆದರೂ ಕೂಡ ಆದಿಕಾಂಡದಿಂದ ಹಿಡಿದು ಪ್ರಕಟಣೆ ಪುಸ್ತಕದ ವರೆಗೂ ಕ್ರಿಸ್ತನು ಸರ್ಪದ ತಲೆಯನ್ನು ಜಜ್ಜುವ ಬಗ್ಗೆ ಅನೇಕ ರೀತಿಯಲ್ಲಿ ತಿಳಿಸಲ್ಪಟ್ಟಿದೆ. ಅಂದರೆ ದೇವರ ವಾಕ್ಯ ಸುಳ್ಳೇ ? ಇಲ್ಲವೇ ಅನೇಕ ಜನರು ಈ ಬಗ್ಗೆ ಅರ್ಥ ಮಾಡಿಕೊಂಡಿರುವುದು ತಪ್ಪೇ ? ದೇವರ ವಾಕ್ಯವು ಎಂದಿಗೂ ಸುಳ್ಳಾಗುವುದಿಲ್ಲ, ಅಂದ ಮೇಲೆ ಜನಾಭಿಪ್ರಾಯವು ತಪ್ಪಾಗಿರುವುದರಲ್ಲಿ ಸಂಶಯವಿಲ್ಲ. ಸರ್ಪವು ಆತನ ಹಿಮ್ಮಡಿಯನ್ನು ಕಚ್ಚಬೇಕು ಎಂದು ತಿಳಿಸಿದೆ. ಕ್ರಿಸ್ತನ ಕಾಲದಲ್ಲಿ ಆ ಸರ್ಪವೇ ಇಲ್ಲದಿದ್ದ ಮೇಲೆ, ಆತನ ಹಿಮ್ಮಡಿಯನ್ನು ಕಚ್ಚುವ ಪ್ರಸಂಗವೇ ಬರುವುದಿಲ್ಲ. ಆದರೆ ದೇವರ ವಾಕ್ಯ ಸುಳ್ಳಲ್ಲ. ಹಾಗಿದ್ದ ಮೇಲೆ ಇದರಲ್ಲಿ ಬೇರೆ ಏನೋ ಅರ್ಥವಿರಬೇಕು, ಇಬ್ರಿಯ 2:14-15ರಲ್ಲಿ ನಾವು ಓದುವಾಗ, ಕ್ರಿಸ್ತನು "ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಡಗಿಸಿ ಬಿಡುವುದಕ್ಕೂ....." ಎಂದು ತಿಳಿಸಿದೆ. ಅಂದರೆ ಕ್ರಿಸ್ತನ್ನು ತನ್ನ ಮರಣದಿಂದ ಮರಣಕ್ಕೆ ಅಧಿಕಾರಿಯಾದವನನ್ನು ಕ್ರಿಸ್ತನು ತನ್ನ ಮರಣದಿಂದ ಸಾಯಿಸಿದ್ದ ಪಕ್ಷದಲ್ಲಿ, ಕ್ರಿಸ್ತನ ಪುನರುತ್ಥಾನದ ನಂತರ ಈ ಲೋಕದಲ್ಲಿ ಮರಣವೇ ಇರಕೂಡದಾಗಿತ್ತು. ಇವೆಲ್ಲವನ್ನೂ ನಾವು ಯೋಚಿಸುವಾಗ, ಯಾವುದು ಸರಿ—ಜನಾಭಿಪ್ರಾಯದ ನಂಬುಗೆಯೋ ಅಥವಾ ಸತ್ಯವೇದದಲ್ಲಿನ ದೇವರ ವಾಕ್ಯವೋ ? ಎಂಬ ಸಂದೇಹ ಬರಬಹುದು. ನಾನು ಈ ಮೊದಲೇ ತಿಳಿಸಿದಂತೆ ದೇವರ ವಾಕ್ಯವು ಎಂದೂ ಸುಳ್ಳಾಗುವುದಿಲ್ಲ. ಆದರೆ ಅದನ್ನು ಮನುಷ್ಯ ಜ್ಞಾನದಿಂದ ಅರ್ಥ ಮಾಡಿಕೊಂಡಲ್ಲಿ, ಹೀಗೆ ಗಲಿಬಿಲಿಗೆ ಒಳಗಾಗಬೇಕಾಗುತ್ತದೆ, ಕ್ರಿಸ್ತನ ಮರಣದಿಂದ ಏನು ಸಂಭವಿಸಿತು, ಮತ್ತು ಮಾನವರಿಗೆ ಅದರಿಂದ ಲಭಿಸಿದ ಪ್ರಯೋಜನವೇನು ಎಂಬುದನ್ನು ಮುಂದೆ ತಿಳಿಯೋಣ.

### ಸ್ತ್ರೀಯು ಹಿಂದು ಸಂಕೇತವಾಗಿ

ಆದಿಕಾಂಡದ 2 ಮತ್ತು 3ನೇ ಅಧ್ಯಾಯಗಳಲ್ಲಿ ಪ್ರಥಮ ಸ್ತ್ರೀಯಾದ ಹವ್ವಳ ಬಗ್ಗೆ ನಾವು ಓದುತ್ತೇವೆ, ಪ್ರಥಮ ಸ್ತ್ರೀಯು ಶೋಧನೆಗೆ ಒಳಗಾಗಿ, ದೇವರಿಗೆ ಅವಿಧೇಯಳಾಗಿ, ಪಾಪಕ್ಕೆ ಕಾರಣಳಾದಳೆಂದು ಓದುವಾಗ, ಅನೇಕರು ಹವ್ವಳ ಬಗ್ಗೆ ಯಾವ ಒಳ್ಳೆಯ ಅಭಿಪ್ರಾಯವನ್ನೂ ತೋರಗೊಡದೆ, ಆಕೆಯನ್ನು ಮನಸ್ಸಿನಲ್ಲಿಯೇ ದ್ವೇಷಿಸುವವರಾಗುತ್ತಾರೆ, ಆದರೂ ನಾವು ಸ್ವಲ್ಪ ಆಳವಾಗಿ ಆಲೋಚಿಸಿದರೆ,

ಹೆವ್ವಳು ವಿನನ್ನು ಪ್ರತಿನಿಧಿಸುತ್ತಾಳೆಂಬುದು ವಿಶದವಾಗುತ್ತದೆ. ಆಕೆಯು ಹಾವೇ ನನ್ನು ಪ್ರಕಟಪಡಿಸಿದಳೋ ಅದನ್ನು ಪ್ರತಿನಿಧಿಸುತ್ತಾಳೆ. ಆದಿಕಾಂಡ 3:2-3 ವಚನಗಳನ್ನು ನೋಡಿ—"ಸ್ತ್ರೀಯು—ತೋಟದಲ್ಲಿರುವ ಮರಗಳ ಹಣ್ಣುಗಳನ್ನು ನಾವು ತಿನ್ನಬಹುದು ; ಆದರೆ ತೋಟದ ಮಧ್ಯದಲ್ಲಿರುವ ಈ ಮರದ ಫಲದ ವಿಷಯ ವಾಗಿ—ಇದನ್ನು ತಿನ್ನಲೂ ಕೂಡದು ; ತಿಂದರೆ ಸಾಯುವಿರಿ, ಎಂದು ದೇವರು ಹೇಳಿ ದ್ದಾನೆ, ಅಂದಳು," ಇಲ್ಲಿ ಆಕೆಯು ಸತ್ಯವನ್ನೇ ನುಡಿಯುತ್ತಾಳೆ. ಸುಳ್ಳನ್ನು ಹೇಳ ಲಿಲ್ಲ, ದೇವರು ಹೇಳಿದ ವಾಕ್ಯವನ್ನು ಹೇಳುತ್ತಾಳೆ, ಅವಳು ದೇವರ ಮನಸ್ಸನ್ನೇ ಪ್ರಕಟಪಡಿಸುತ್ತಾಳೆ, ಆದಾಮನು ಆಕೆಯ ಹೆಸರನ್ನು "ಹವ್ವ" ಎಂದು ಕರೆಯುತ್ತಾನೆ (ಆದಿ, 3:20) ಅಂದರೆ "ಜೀವ" ಎಂದರ್ಥ. ಯಾಕೆಂದರ ಜೀವದ ನಿರೀಕ್ಷೆಯನ್ನು ದೇವರು ಆಕೆಯ ಮೂಲಕ ಉಂಟಾಗುವ ಸಂತತಿಯಿಂದ ವಾಗ್ದಾನ ಮಾಡಿದನ್ನು ಆದ್ದರಿಂದ ಆಕೆಯು ದೇವರ ಸತ್ಯಕ್ಕೂ ಮತ್ತು ಅದು ತೋರಿಸಿಕೊಡುವ ಜೀವಕ್ಕೂ ಸಂಬಂಧಿಸಿದ ಒಂದು ಜನಾಂಗವನ್ನು ಪ್ರತಿನಿಧಿಸುತ್ತಾಳೆ.

ವಿಶ್ವಾಸಿಗಳ ಗುಂಪನ್ನು ಒಬ್ಬ ಸ್ತ್ರೀಯು ಪ್ರತಿನಿಧಿಸುವುದನ್ನು ಸತ್ಯವೇದದಲ್ಲಿ ನೋಡಬಹುದು. ಪೌಲನು ಹೇಳುತ್ತಾನೆ—"ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯದಾಗಿ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯ ಮಾಡಿದೆನಲ್ಲಾ" (2 ಕೊರಿಂಥ 11 : 2). "ಸಭೆಯು ಕ್ರಿಸ್ತನಿಗೆ ಹೇಗೆ ಅಧೀನ ವಾಗಿದೆಯೋ ಹಾಗೆಯೇ ಸ್ತ್ರೀಯರು ತಮ್ಮ ತಮ್ಮ ಗಂಡಂದಿರಿಗೆ ಅಧೀನವಾಗಿರಿ.... ನಾನು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು ಮಾತಾಡುತ್ತಾ ಇದ್ದೇನೆ, ಇದುವರೆಗೂ ಗುಪ್ತವಾಗಿದ್ದ ಸತ್ಯಾರ್ಥವು ಬಹು ಗಂಭೀರವಾದದ್ದು," (ಎಫೆಸ 5 : 23—32), ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂತು, ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧ ಮಾಡಿಕೊಂಡಿದ್ದಾಳೆ," ಪ್ರಕಟನೆ, 19 : 7) ಹೀಗೆ ಸ್ತ್ರೀಯು ಒಂದು ಸಂಕೇತವಾಗಿ ಉಪಯೋಗಿಸಲ್ಪಟ್ಟಿದೆ,

ಇಲ್ಲಿಯವರೆಗೂ ಸರ್ಪ ಹಾಗೂ ಸ್ತ್ರೀಯು ಸಂಕೇತವಾಗಿ ಬಳಸಲ್ಪಟ್ಟಿದೆ ಯೆಂಬುದನ್ನು ನೋಡಿದೆವು, ಹಾಗೆಯೇ ಸರ್ಪದ ಸಂತಾನ ಸ್ತ್ರೀಯ ಸಂತಾನವನ್ನು ಹೇಗೆ ಸಾಂಕೇತಿಕವಾಗಿ ಬಳಸಲ್ಪಟ್ಟಿದೆಯೆಂಬುದನ್ನು ನೋಡೋಣ,

**ಸರ್ಪದ ಸಂತಾನ ಒಂದು ಸಂಕೇತವಾಗಿ.**

ಏದೆನ್ ತೋಟದಲ್ಲಿ ಆ ಸರ್ಪಕ್ಕೂ ಆ ಸ್ತ್ರೀಗೂ ನಿಜವಾಗಿಯೂ ಹಗೆತನ ಉಂಟಾಗಿರಲೇಬೇಕು, ಏಕೆಂದರೆ ದೇವರೇ ಕೊಟ್ಟ ಶಾಪವದು—ಎಂದು ಅನೇಕರು ಯೋಚಿಸಬಹುದು, ಹಾಗೆಂದೇ ಭಾವಿಸೋಣ, ಸರ್ಪದ ಹಗೆತನದಿಂದ ಆ ಸ್ತ್ರೀಗೆ ಉಂಟಾದ ತೊಂದರೆ ಕಷ್ಟಗಳೇನು ಎಂದು ಪ್ರಶ್ನಿಸಿದಾಗ, ಸಿಗುವ ಉತ್ತರವೇನು ? ಆ ಘಟನೆಯ ನಂತರ ಹವ್ವಳು ಜೀವಿಸಿರುವವರೆಗೂ ಆ ಸರ್ಪದ ಬಗ್ಗೆ ಏನೂ ಉಲ್ಲೇಖಿಸಿಲ್ಲ, ಇಬ್ಬರು ವೈರಿಗಳು ಒಂದೇ ಸ್ಥಳದಲ್ಲಿ ಜೀವಿಸುವಾಗ, ಒಬ್ಬರಿಂದ

ಮತ್ತೊಬ್ಬರಿಗೆ ಅಪಾಯ ತಪ್ಪಿದ್ದಲ್ಲ, ಇಲ್ಲಿ ಹವ್ವಳಿಗೆ ಆ ಸರ್ಪದಿಂದಾಗಲಿ ಸರ್ಪಕ್ಕೆ ಹವ್ವಳು ಅಥವಾ ಆದಾಮನಿಂದಾಗಲೀ ಯಾವ ಅಪಾಯವು ಸಂಭವಿಸಿರುವುದನ್ನು ನಾವು ಓದುವುದಿಲ್ಲ. ಹಾಗಾದರೆ ಆ ಶಾಪದ (ಆದಿ. 3. 15) ಅರ್ಥವೇನು ?

ಪ್ರಾರಂಭದಲ್ಲಿಯೇ ತಿಳಿಸಿದಂತೆ, ಆ ಸರ್ಪವು ಏನನ್ನು ಪ್ರಕಟಪಡಿಸುತ್ತದೋ ಅಂತಹ ಶರೀರಭಾವದ ಬಲಹೀನತ್ವಗಳಲ್ಲಿ ತಮ್ಮ ಜೀವಿತವನ್ನು ನಡೆಸಿಕೊಳ್ಳಲು ಯಾರು ಅವಕಾಶ ಕೊಡುತ್ತಾರೋ ಅಂತಹವರನ್ನು ಸರ್ಪದ ಸಂತಾನವು ಪ್ರತಿನಿಧಿಸುತ್ತದೆ. ಪುನಃ ಕೆಲವರ ತಪ್ಪು ಅಭಿಪ್ರಾಯದಂತೆ ಸರ್ಪಕ್ಕೆ ಕೊಟ್ಟ ಶಾಪವು ಅಕ್ಷರಶಃ ವಾಗಿದ್ದು ಸರ್ಪದ ಸಂತಾನಕ್ಕೂ, ಸ್ತ್ರೀಯ ಸಂತಾನಕ್ಕೂ ಹಗೆತನವಿರುವುದಾದರೆ ಆದಿನಿಂದ ಇದಿನವರೆಗೂ ಮಾನವರು ಸರ್ಪದ ಹುಟ್ಟೇ ಇಲ್ಲದಂತೆ ನಾಶಪಡಿಸಲು ಪ್ರಯತ್ನ ಮಾಡುತ್ತಿದ್ದರು. ಆದರೆ ಅಂತಹ ಘಟನೆಯನ್ನು ನಾವು ಇಂದಿಗೂ ಕೇಳಿಲ್ಲ. ಪ್ರಾಣಿ ಶಾಸ್ತ್ರಜ್ಞರನ್ನು ಈ ಬಗ್ಗೆ ವಿಚಾರಿಸಿದಲ್ಲಿ ಸತ್ಯಾಂಶ ಹೊರಬೀಳುತ್ತದೆ. ಸರ್ಪಗಳಲ್ಲಿ ವಿಷವಿರುವ ಸರ್ಪಗಳೂ ವಿಷವಿಲ್ಲದ ಸರ್ಪಗಳೂ ಇವೆ. ವಿಷ ಸರ್ಪಗಳು ಮನುಷ್ಯನನ್ನು ಕಚ್ಚಿದಾಗ, ಕೂಡಲೇ ಚಿಕಿತ್ಸೆ ಪಡೆಯದಿದ್ದರೆ ಸಾಯುತ್ತಾನೆ. ತಕ್ಷಣ ಚಿಕಿತ್ಸೆ ಪಡೆದರೆ ಬದುಕುತ್ತಾನೆ. ಹಾಗೆಂದಾಕ್ಷಣ ಸರ್ಪಕ್ಕೂ ಮಾನವನಿಗೂ ಹಗೆತನ ಇದ್ದಂತಾಗುವುದಿಲ್ಲ. ಇತರೇ ವಿಷಜಂತುಗಳ ಹಾಗೆ ಕ್ರೂರ ಮೃಗಗಳ ಹಾಗೆ, ಈ ಸರ್ಪವೂ ಒಂದು. ತಾನಾಗಿಯೇ ಮಾನವನನ್ನು ಹುಡುಕಿಕೊಂಡು ಬಂದು, ತನ್ನ ದ್ವೇಷ ಸಾಧಿಸಲು, ಕಚ್ಚುವುದಿಲ್ಲ. ವಾಸ್ತವಾಂಶ ಹೀಗಿರುವಾಗ ಸರ್ಪದ ಸಂತಾನಕ್ಕೂ ಸ್ತ್ರೀಯ ಸಂತಾನಕ್ಕೂ ಹಗೆತನವೆಲ್ಲಿಯದು ? ಹಾಗಿದ್ದಲ್ಲಿ, ಸರ್ಪದ ಸಂತಾನವೆಂದರೇನು ? ಈಗಾಗಲೇ ತಿಳಿಸಿದಂತೆ, ದೇವರಿಗೆ ವಿರುದ್ಧವಾದದನ್ನು ಯಾರು ಮಾಡುತ್ತಾರೋ ಅವರೇ ಸರ್ಪದ ಸಂತಾನದವರಾಗಿರುತ್ತಾರೆ. ಈ ಕೆಲವು ವಚನ ನೋಡಿ. "ಅವರು (ದುಷ್ಟರು) ಸರ್ಪದಂತೆ ವಿಷ ಭರಿತರು." (ಕೀರ್ತನೆ 58:4) ತಮ್ಮ ನಾಲಿಗೆಯನ್ನು ಸರ್ಪದಂತೆ ಹದ ಮಾಡಿದ್ದಾರೆ; ಅವರ ತುಟಿಗಳ ಹಿಂದೆ ಹಾವಿನ ವಿಷವಿದೆ" (ಕೀರ್ತನೆ 143:3). ಇಲ್ಲಿ ದುಷ್ಟರನ್ನು ಸರ್ಪಕ್ಕೆ ಹೋಲಿಸಿದೆ, ಹಾಗಾದರೆ ದುಷ್ಟರಿಗೆ ಸರ್ಪದ ಹಾಗೆ ವಿಷದ ಚೀಲ ಹಾಗೂ ವಿಷದ ಹಲ್ಲುಗಳು ಇರುತ್ತವೋ ? ಇಲ್ಲ. "ಹಾವುಗಳೇ, ಸರ್ಪ ಜಾತಿಯವರೇ, ನರಕ ದಂಡನೆಗೆ ಹೇಗೆ ತಪ್ಪಿಸಿಕೊಳ್ಳುವಿರಿ," ಮತ್ತಾಯ 23;33) ಇಲ್ಲಿ ಯೇಸುಕ್ರಿಸ್ತನು ಯಾರನ್ನು ಸಂಬೋಧಿಸಿ, ಹಾವುಗಳೇ ಸರ್ಪ ಜಾತಿಯವರೇ ಎಂದು ಕರೆದಿದ್ದಾನೆ ? ಸರ್ಪದ ಮರಿಗಳನ್ನೇ ? ಏದೆನ್ ತೋಟದಲ್ಲಿ ಶಾಪಕ್ಕೆ ಗುರಿಯಾದ ಆ ಸರ್ಪದ ಸಂತಾನವನ್ನೇ? ಅಲ್ಲ. ತನ್ನ ಸ್ವಕೀಯ ಜನಾಂಗವನ್ನು— ತನ್ನ ಸ್ವಜಾತಿಯವರನ್ನು —ತನ್ನ ದೇಶದವರನ್ನು__ಅಂದರೆ ಯೆಹೂದ್ಯರನ್ನು__ಯೇಸುಕ್ರಿಸ್ತನು ಆ ರೀತಿಯಾಗಿ ಸಂಬೋಧಿಸುತ್ತಾನೆ. ಯಾಕೆ ಆತನು ಅವರನ್ನು ಹಾಗೆ ಕರೆದನು ? ಅಂದಿನ ಫರಿಸಾಯರೂ ಶಾಸ್ತ್ರಿಗಳೂ ಹೊಂದಿದ್ದ ಮನೋಭಾವದಿಂದ, ಅವರ ಹೃದಯಗಳು

ಕೆಡುಕದಿಂದ ತುಂಬಿದ್ದು, ದೇವರಿಗೆ ವಿರುದ್ಧವಾಗಿತ್ತು. ಸ್ನಾನಿಕನಾದ ಯೋಹಾನನೂ ಕೂಡ ಅವರನ್ನು ಅದೇ ರೀತಿ ಸಂಬೋಧಿಸುತ್ತಾನೆ (ಲೂಕ 3:7). ಆದ್ದರಿಂದ ಸರ್ಪವೆಂದರೆ ಯಾವುದು ದೈವೀಕ ಯೋಜನೆಗೆ ವಿರುದ್ಧವಾದುದೋ, ಯಾವುದು ಶರೀರ ಭಾವವನ್ನು ಕಾರ್ಯಾಚರಣೆಗೆ ಸೇರಿಸುತ್ತದೋ ಅದರ ಸಂಕೇತವಾಗಿದೆ. ಸರ್ಪದ ಸಂತಾನವೆಂದರೆ ಅಂತಹ ಗುಣವುಳ್ಳವರು ಎಂದರ್ಥ. (ಮಾರ್ಕ 7:20-23 ಮತ್ತು ಯಾಕೋಬ 1:14-15 ಹೋಲಿಸಿ)

## ಸ್ತ್ರೀಯ ಸಂತಾನ ಒಂದು ಸಂಕೇತವಾಗಿ

ಈಗಾಗಲೇ ನಾವು ತಿಳಿದಂತೆ, ಸ್ತ್ರೀಯು ದೇವರ ಸತ್ಯಕ್ಕೂ ಅದು ತೋರಿಸಿಕೊಡುವ ಜೀವಕ್ಕೂ ಸಂಬಂಧಿಸಿದ ಒಂದು ಜನಾಂಗವನ್ನು ಪ್ರತಿನಿಧಿಸುತ್ತಾಳೆ. ಅಲ್ಲದೆ, ಆಕೆಯ ಮೂಲಕ ಉಂಟಾಗುವ ಸಂತತಿಯಿಂದ ಜೀವದ ನಿರೀಕ್ಷೆಯನ್ನು ವಾಗ್ದಾನ ಮಾಡಿರುತ್ತೆ. ಹಾಗಾದರೆ ಸ್ತ್ರೀಯ ಸಂತಾನ ಯಾರು ? ಆದಾಮನ ಸಂತಾನದವರಲ್ಲರೇ ? ಇಲ್ಲ, ಆದಿಕಾಂಡ 3:15ನೇ ವಚನವನ್ನು ನಾವು ಮತ್ತೊಮ್ಮೆ ಓದಿದಲ್ಲಿ ಸ್ಪಷ್ಟವಾಗುತ್ತದೆ, ಸ್ತ್ರೀಯ ಸಂತಾನವು ನೇರವಾಗಿ ದೇವರ ಮಗನಾದ ರಕ್ಷಕನಾದ ಯೇಸುಕ್ರಿಸ್ತನನ್ನು ಸೂಚಿಸುತ್ತದೆ, ತನ್ನ ಸ್ವಂತ ಬಲಿಯಿಂದ ಪಾಪ ಮತ್ತು ಮರಣಕ್ಕೆ ಸಾವಿನ ಹೊಡೆತವನ್ನು ಕೊಟ್ಟದ್ದರಲ್ಲಿ, ಅದು ''ತನಲ್ಲಿರುವವರಿಗೆ" ಮತ್ತು ದೇವರ ಮಹಿಮೆಗೆ ಫಲಕೊಡುವ ದೇವರ ವಾಕ್ಯವು ನೆಲೆಯಾಗಿರುವಂಥವರೆಲ್ಲರಿಗೂ ಅನ್ವಯವಾಗುತ್ತದೆ, ಕ್ರಿಸ್ತನೊಬ್ಬನನ್ನೇ ಸೂಚಿಸಿದರೂ ಕೂಡ "ಆತನವರು" ಅಂದರೆ ಯಾರು ಸರ್ಪದ ಸಂತಾನಕ್ಕೆ ವಿರುದ್ಧವಾಗಿದ್ದು, ಶರೀರ ಭಾವಕ್ಕೆ ಒಳಪಡದೆ, ದೈವೀಕ ಸತ್ಯವನ್ನೇ ಹಿಡಿದವರಾಗಿರುತ್ತಾರೋ ಅಂಥವರಿಗೂ ಅನ್ವಯಿಸುತ್ತದೆ, ಕ್ರಿಸ್ತನು ಹೇಗೆ ದೇವರಾತ್ಮದಿಂದ ಹುಟ್ಟಿದವನಾದನೋ ಹಾಗೆಯೇ ಆತ್ಮೀಯವಾಗಿ, ಅವರು ಕೂಡ ವಾಕ್ಯದ ಆತ್ಮದಿಂದ ಒಂದು ನೂತನ ಜೀವಿತಕ್ಕೆ ಹುಟ್ಟಿದವರಾಗಿರುತ್ತಾರೆ. ಪೇತ್ರನು ಹೇಳುವುದನ್ನು ಕೇಳಿ—"ನೀವು ಪುನರ್ಜನ್ಮ ಹೊಂದಿದವರಾಗಿದ್ದೀರಲ್ಲಾ ; ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ, ನಾಶವಾಗದ ಬೀಜದಿಂದಲೇ ಉಂಟಾದದ್ದು, ಅದು ದೇವರ ಸದಾ ಜೀವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು." (1 ಪೇತ್ರ 1:23). ಯೇಸು ಹೇಳಿದ್ದು, "ನೀವು ಮೇಲಿನಿಂದ ಹುಟ್ಟಬೇಕು," (ಯೋಹಾನ 3:7). "ಆತನನ್ನು ಸೇವಿಸುವವರ ಸಂತಾನದವರು ಯೆಹೋವನ ಸಂತಾನದವರೆಂದು ಎಣಿಸಲ್ಪಡುವರು." (ಕೀರ್ತನೆ. 22:30). "ಅವನ ಪ್ರಾಣವನ್ನು ಅಪರಾಧ ಬಲಿಯಾಗಿ ಇಟ್ಟ ಮೇಲೆ, ಅವನು ಸಂತಾನವನ್ನು, ನೋಡುವನು, ತನ್ನ ದಿವಸಗಳನ್ನು ಉದ್ದ ಮಾಡುವನು ಮತ್ತು ಯೆಹೋವನಿಗೆ ಸಂತೋಷವಾದದ್ದು — ಅವನ ಕೈಯಲ್ಲಿ ಸಫಲವಾಗುವುದು." (ಯೆಶಾಯ 53;10–ಹಳೇ ಭಾಷಾಂತರ). ಈ ವಚನಗಳನ್ನು ನಾವು ಓದುವಾಗ, ಮತ್ತೊಂದು ಸಂತಾನದ ಬಗ್ಗೆ ನೋಡುತ್ತೇವೆ, ಅದು ಯೆಹೋವನ ಸಂತಾನ—

ಯೇಸುಕ್ರಿಸ್ತನ ಸಂಬಂಧದ ಸಂತಾನವೆಂದು ಅರಿಯುತ್ತೇವೆ. ಇವರೂ ಕೂಡ ರಕ್ತ ಸಂಬಂಧದಿಂದ ಆದಾಮನ ಸಂತಾನದವರಾದರೂ ಆತ್ಮೀಯ ಸಂಬಂಧದಲ್ಲಿ ಯೆಹೋವನ ಸಂತಾನದವರಾಗಿರುವವರು.

ಯೇಸುಕ್ರಿಸ್ತನು ಇತರೇ ಮಾನವರಂತೆ ಹುಟ್ಟಿದ್ದರೂ, ಮಾನವರಂತೆ ಶೋಧನೆಗೆ ಗುರಿಯಾದರೂ ಕೂಡ, ಇತರೇ ಮಾನವರು ಅಂಥ ಸನ್ನಿವೇಶದಲ್ಲಿ ವಿಫಲರಾದಾಗ, ತಾನು ಹೊಂದಿದ ಸ್ವಭಾವದ ಮೇಲೆ ಆತನು ಜಯಹೊಂದಿ ದೇವರಿಗೆ ಪಾಪ ರಹಿತವಾದ ವಿಧೇಯತ್ವವನ್ನು ಸಲ್ಲಿಸಲು ಹೇಗೆ ಸಾಧ್ಯವಾಯಿತು ? ಪ್ರಥಮವಾಗಿ, ಆತನು ದೇವರಾತ್ಮದಿಂದ ಹುಟ್ಟಿದವನಾಗಿದ್ದನು. ಎರಡನೇದಾಗಿ, ಪಾರಮಾರ್ಥಿಕದ ಕಡೆ ಮನಸ್ಸನ್ನು ಹೊಂದಿದ ತಾಯಿಯಿದ್ದಳು. ಅದರಿಂದಾಗಿ ತಾನು ಬೆಳೆಯುತ್ತಾ ಬಂದಂತೆ, ತನ್ನಲ್ಲಿದ್ದ ಒಳ್ಳೆಯ ಗುಣಗಳನ್ನು ಸ್ವಪ್ರೇರಣೆಯಿಂದ ಬೆಳೆಸಿಕೊಳ್ಳಲು ಸಾಧ್ಯವಾಯಿತು. (ಲೂಕ 2;40;42-47,52), ಮೂರನೆಯದಾಗಿ, ಯೇಸು ಕ್ರಿಸ್ತನು ಬಹುಮಟ್ಟಿಗೆ ತಂದೆಯಾದ ದೇವರ ಮೇಲೆ ಆತುಕೊಂಡಿದ್ದನು. ಪರಿಣಾಮವಾಗಿ, ಏದೇನ್ ತೋಟದಲ್ಲಿ ಆದಿ ತಂದೆತಾಯಿಗಳ ಪಾಪದಿಂದುಂಟಾದ ಪರಿಣಾಮಗಳನ್ನು ಪಾರಂಪರ್ಯವಾಗಿ ಹೊಂದಿದ ಶರೀರದಲ್ಲಿ ದೈವೀಕ ರೂಪವು ಸಂಪೂರ್ಣವಾಗಿ ಪ್ರಕಟಗೊಂಡಿತು. ಪ್ರಥಮ ಮಾನವನಾದ ಆದಾಮನನ್ನು ದೇವರು ತನ್ನ ಸ್ವರೂಪದಲ್ಲಿ —ದೇವ ಸ್ವರೂಪದಲ್ಲಿ ಉಂಟು ಮಾಡಿದ್ದನು. (ಆದಿ. 1:27). ಆದರೆ ಆದಾಮನು ದೇವಸ್ವರೂಪವನ್ನು ಉಳಿಸಿಕೊಂಡನೇ ? ಇಲ್ಲ. ಆದರೆ ಯೇಸು ಕ್ರಿಸ್ತನು ಆ ದೇವಸ್ವರೂಪವನ್ನು ತನ್ನಲ್ಲಿ ಸಂಪೂರ್ಣವಾಗಿ ಪ್ರಕಾಶಕ್ಕೆ ತಂದನು. ಆತನಿಗೆ ದೇವರ ಆತ್ಮವು ಅಳತೆ ಇಲ್ಲದಂತೆ ಕೊಡಲ್ಪಟ್ಟಿತು. (ಯೋಹಾನ 3:34). ಹೀಗೆ ಯೇಸುಕ್ರಿಸ್ತನು ದೇವರ ಮಗನಾಗಿದ್ದುಕೊಂಡು, ಆದಿಕಾಂಡ 3:15ರಲ್ಲಿ ವಾಗ್ದಾನ ಮಾಡಿದ ಸ್ತ್ರೀಯ ಪರಿಪೂರ್ಣ ಸಂತಾನವಾಗಿದ್ದನು. ಯೇಸುವು ಶರೀರ ಭಾವವನ್ನು ಹೊಂದಿದ್ದರೂ, ತಂದೆಯಾದ ದೇವರಿಗೆ ಸಂಪೂರ್ಣ ವಿಧೇಯತೆಯನ್ನು ಸಲ್ಲಿಸಿದನು. (ಯೋಹಾನ 6:63). ಆತನು ತಂದೆಯ ಚಿತ್ತಕ್ಕೆ ಬದಲಾಗಿ ತನ್ನ ಚಿತ್ತಕ್ಕೆ ಒಳಪಟ್ಟಿದ್ದಲ್ಲಿ, 'ಶಿಲುಬೆಯ ಮರಣದವರೆಗೂ ಸಂಪೂರ್ಣ ವಿಧೇಯತೆಯನ್ನು' ಸಲ್ಲಿಸಲು ಸಾಧ್ಯವಾಗುತ್ತಿರಲಿಲ್ಲ. ಆತನು ದೇವರು ಅಗತ್ಯತೆಗಳಿಗೆ ಒಪ್ಪಿಸಿಕೊಟ್ಟನು. "ನನ್ನ ಚಿತ್ತವಲ್ಲ, ನಿನ್ನ ಚಿತ್ತವೇ ಎಂದು ಹೇಳಲಿಲ್ಲವೇ ?" (ಲೂಕ 22;42).

ಶರೀರ ಭಾವವು (ಮಾಂಸವು) ಯುಗಯುಗಗಳಿಂದಲೂ ದೇವರಿಗೆ ವಿರುದ್ಧವಾಗಿ ಹೋರಾಟ ನಡೆಸುತ್ತಲೇ ಬಂದಿದೆ. ಆದರೂ ಕೂಡ ಅದನ್ನು ಒಂದೇ ಒಂದು ಮಾರ್ಗದಿಂದ ಪರಿಹರಿಸಬಹುದು—'ರಕ್ತ ಚೆಲ್ಲುವುದರ ಮೂಲಕ'. ಯೇಸುವಿನ ಶರೀರವು ನಿರ್ಜೀವವಾಗಿ ಶಿಲುಬೆಯ ಮೇಲೆ ತೂಗಲ್ಪಟ್ಟಿದ್ದು ಮಾನವ ಜನಾಂಗಕ್ಕೆ ಒಂದು ರಕ್ಷಣೆಯ ಪಾಠವನ್ನು ತೋರಿಸಿದೆ. ಹೀಗೆ ಆತನು ಶರೀರದಾಶೆ, ಸ್ವೇಚ್ಛಾಭಿಲಾಷೆ

ಗಳನ್ನು ಹತೋಟಿಯಲ್ಲಿಟ್ಟು, ತನ್ನ ಚಿತ್ತವನ್ನು ತಂದೆಯ ಚಿತ್ತಕ್ಕೆ ಒಪ್ಪಿಸಿ ಕೊಡುವುದರ ಮೂಲಕ ಅದನ್ನು ಶಿಲುಬೆಗೆ ಹಾಕಿದನು. ಯಾವಾಗ ಆತನು ನಿರ್ಜೀವವಾಗಿ ಶಿಲುಬೆಯ ಮೇಲೆ ತೂಗು ಹಾಕಲ್ಪಟ್ಟನೋ ಆಗ ಹೋರಾಟವು ಅಂತ್ಯಗೊಂಡಿತು. ಆ ರೀತಿಯಾಗಿ ಒಪ್ಪಿಸಿಕೊಡುವ ಆ ಅಂತಿಮ ಕಾರ್ಯದಲ್ಲಿ ಶರೀರ ಭಾವವು ಎಂದೆಂದಿಗೂ ಮೌನಪಡಿಸಲ್ಪಟ್ಟಿತಲ್ಲದೆ, ಇನ್ನೆಂದಿಗೂ ದೇವರ ಚಿತ್ತಕ್ಕೆ ವಿರುದ್ಧವಾಗಿ ಅದು ತಾನೇ ನಿಲ್ಲಲಾರದಂತೆ ಮಾಡಲ್ಪಟ್ಟಿತು.

"ಶಿಲುಬೆಗೆ ಹಾಕಲ್ಪಟ್ಟ ಯೇಸುವು" ರಕ್ಷಣೆ ಹೊಂದಲು ಮಾನವರು ಏನು ಮಾಡಬೇಕೆಂದು ದೇವರು ಅಪೇಕ್ಷಿಸುತ್ತಾನೆಂಬುದರ ಸಾರ್ವತ್ರಿಕ ಪ್ರದರ್ಶನವಾಗಿದೆ. ಆದರೆ ಎಬ್ಬಿಸಲ್ಪಟ್ಟ ಕ್ರಿಸ್ತನು 'ಕ್ರಿಸ್ತನಲ್ಲಿ ಇರುವವರ' ನಿರೀಕ್ಷೆಯ ಸಂಕೇತವಾಗಿದ್ದಾನೆ. (ರೋಮಾ, 4:25). ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದುದರಲ್ಲಿ, 'ಕ್ರಿಸ್ತನಲ್ಲಿರುವ ಎಲ್ಲರೂ' ಎದ್ದು ಬರುತ್ತಾರೆಂಬುದಕ್ಕೆ ಖಾತ್ರಿಯಾಗಿದೆ. "ಹೇಗೆ ಆದಾಮನಲ್ಲಿ ಎಲ್ಲರೂ ಸಾಯುವವರಾದರೋ ಹಾಗೆಯೇ ಕ್ರಿಸ್ತನಲ್ಲಿ ಎಲ್ಲರೂ ಜೀವಿತರಾಗುವರು," (1 ಕೊರಿಂಥ 15:22-23). ಎಲ್ಲಾ ಮಾನವರು ಸತ್ತರೂ ಕೂಡ, ಪುನರುತ್ಥಾನ ಹೊಂದಿದವರಲ್ಲಿ ಕ್ರಿಸ್ತನವರು ಮಾತ್ರ ನಿತ್ಯ ಜೀವವನ್ನು ಹೊಂದುವರು. ಹೇಗೆ ಕ್ರಿಸ್ತನು ತನ್ನಲ್ಲಿರುವ ಸರ್ಪದ ಶಕ್ತಿಯ ಮೇಲೆ ಜಯ ಹೊಂದಿದನೋ ಹಾಗೆಯೇ ಮಾನವರೂ ಕೂಡ ಜಯ ಹೊಂದಲು ತನ್ನ ಮರಣ, ಹಾಗೂ ಪುನರುತ್ಥಾನದಿಂದ ಸಾಧ್ಯವಾಗುವಂತೆ ಮಾಡಿದನು. (ಮುಂದುವರೆಯುವುದು)

---

## ಮಕ್ಕಳ ದೀಪ-8 (ಹಿಂದಿನ ಸಂಚಿಕೆಗೆ ಉತ್ತರ)

1. ಶೇಮನ ವಂಶಸ್ಥನು 2. ಊರ್ ಎಂಬ ಪಟ್ಟಣದಲ್ಲಿ, 3. ದೇವರಿಗೆ ಅವಿಧೇಯರಾಗಿದ್ದರು. 4. ದೇವರಿಗೆ ವಿಧೇಯನಾಗಿದ್ದನು, 5. ಸ್ವದೇಶವನ್ನು ಬಿಟ್ಟು ತಾನು ಹೇಳಿದ ದೇಶಕ್ಕೆ ಹೋಗಬೇಕೆಂದು ತಿಳಿಸಿದನು, 6. ಅಬ್ರಾಮನ ಹೆಂಡತಿ ಸಾರಯಳು ಮತ್ತು ಅವನ ಅಣ್ಣನ ಮಗನಾದ ಲೋಟನು. 7. ಆ ದೇಶವನ್ನು ಅಬ್ರಾಮನಿಗೂ ಅವನ ಕುಟುಂಬಕ್ಕೂ ಕೊಡುವುದಾಗಿಯೂ ಅವನ ಕುಟುಂಬವನ್ನು ಒಂದು ದೊಡ್ಡ ಜನಾಂಗವಾಗಿ ಮಾಡುವುದಾಗಿಯೂ ಮತ್ತು ಅವನಿಂದ ಪ್ರಪಂಚದ ಎಲ್ಲಾ ಜನರೂ ಸಂತೋಷಪಡುತ್ತಾರೆ ಎಂದು ದೇವರು ವಾಗ್ದಾನ ಮಾಡಿದನು, 8. ಕತ್ತೆಗಳ ಮೇಲೂ ಮತ್ತು ಒಂಟೆಗಳ ಮೇಲೂ ಪ್ರಯಾಣ ಮಾಡಿದರು. 9. ಅವರು ಕಾನಾನ್ ದೇಶದ ಶೆಕೆಮ್ ಎಂಬ ಊರಿಗೆ ಬಂದರು. 10. ಅಲ್ಲಿ ಅಬ್ರಾಮನು ಒಂದು ಯಜ್ಞವೇದಿಯನ್ನು ಕಟ್ಟಿ, ದೇವರನ್ನು ಕೊಂಡಾಡಿ, ಆರಾಧಿಸಿದನು.

---

ಮೊದಲು ಉತ್ತರ ಬರೆದು ಕಳುಹಿಸಿದವರು: 1. ಇ. ಜಾನ್ ದೇವಾನಂದ್, ತುಮಕೂರು. 2. ಎಸ್. ಪ್ರೇಮಲತ, ಕೋಲಾರ. 3. ಜಿ. ಸುಮ, ಬೆಂಗಳೂರು 4. ಕೆ. ಹೇಮ ಪ್ರೇಮಾತ್, ಗಂಗಸಂದ್ರ,

# ಯೌವನಸ್ಥರಿಗಾಗಿ

## ಯೇಸುಕ್ರಿಸ್ತನ ಸಾಮ್ಯದ ವಿವರಣೆ-3 (ಹಿಂದಿನ ಸಂಚಿಕೆಯಿಂದ)

—ಎ. ಜಯವಂತ, ಮಂಡ್ಯ.

> "ನನ್ನನ್ನು ತೊರೆದು ಮನಸ್ಸು ಬಂದ ಹಾಗೆ ದುರ್ಮಾರ್ಗದಲ್ಲಿ ನಡೆಯುವ ಜನರನ್ನು ನಾನು ದಿನವೆಲ್ಲಾ ಕೈಚಾಚಿ ಕರೆದೆನು"
>
> ಯೆಶಾಯ 65 : 2

ತಂದೆಯ ಚಿತ್ತವು ಏನು ? ಆತನ ಮಕ್ಕಳು ಆತನ ಮನೆಯಿಂದ ದೂರವಿದ್ದು ಶರೀರದ ಅಭಿಲಾಷೆಗಳಲ್ಲಿಯೇ ನಿರತರಾಗಿ ನಾಶವಾಗಬೇಕೆಂಬುದಾಗಿರುತ್ತದೋ ? ಹಾಗೆ ಎಂದಿಗೂ ನೆನಸಬಾರದು. ನಾವು ಇರುವ ಸ್ಥಿತಿಯು ಆತನಿಗೆ ಗೋಚರವಾಗಿದೆ. ನಾವಿರುವಲ್ಲಿಯೇ ನಮ್ಮ ಅಪರಾಧಗಳ, ದ್ರೋಹಗಳ ಅರಿವು ನಮಗಾಗುವುದಾದರೆ ಎಷ್ಟೋ ಒಳ್ಳೆಯದಲ್ಲವೇ ? ಈ ರೀತಿ ನಮ್ಮ ಅಪರಾಧಗಳನ್ನು ಒಪ್ಪಿಕೊಳ್ಳುವುದನ್ನು ನಾವು ದೇವರಿಗೆ ಹೇಗೆ ತೋರ್ಪಡಿಸಬೇಕು ? ನಮ್ಮ ಅಧರ್ಮದ ನೆಲೆಯನ್ನು ಸಂಪೂರ್ಣವಾಗಿ ತೊರೆದು ಮತ್ತು ತಂದೆಯ ಮನೆಯ ಹಾದಿಯನ್ನು ಹಿಡಿಯುವುದರಿಂದ ಅಲ್ಲವೇ ? ಈ ಪ್ರಯಾಣದಲ್ಲಿ ನಾವು ದುರ್ಮಾರ್ಗಕ್ಕೆ ಹಿಂತಿರುಗದೆ ತಂದೆಯ ಮನೆಯ ಕಡೆಗೆ ಸಾಗುತ್ತಿದ್ದಲ್ಲಿ, ತಂದೆಯು ಅಂತಹ ಮಕ್ಕಳನ್ನು ಎಂದಿಗೂ ಹಾಗೆ ಬಿಡನು. ತಂದೆಯ ಪ್ರೀತಿಯು ಇಂತಹ ಮಕ್ಕಳ ಮೇಲೆ ಹೇಗಿರುತ್ತದೆ? "ಅವನು ಇನ್ನೂ ದೂರದಲ್ಲಿರುವಾಗ, ಅವನ ತಂದೆಯು ಅವನನ್ನು ಕಂಡು ಕನಿಕರಪಟ್ಟು ಓಡಿ ಬಂದು, ಅವನ ಕೊರಳನ್ನು ಅಪ್ಪಿಕೊಂಡು ಅವನಿಗೆ ಬಹಳವಾಗಿ ಮುದ್ದಿಟ್ಟನು." (ಲೂಕ 15:20).

ತಪ್ಪು ದಾರಿಗಳಿಗೆ ಮಾನಸಾಂತರಪಟ್ಟು ತನ್ನ ಕಡೆಗೆ ಬರುವವರಿಗೆ ದೇವರು ಸದಾಕಾಲ ತನ್ನ ಸಹಾಯದ ಹಸ್ತವನ್ನು ಚಾಚುತ್ತಾನೆ. ಇಂದು ನಾವು ಜೀವಿಸುತ್ತಿರುವ ಜೀವಿತದ ರೀತಿಯನ್ನು ನೋಡಿದಾಗ ಅದು ದೇವರಿಗೆ ಹೇಸಿಕೆಯಾದ ರೀತಿಯಾಗಿದ್ದರೆ, ಅಂತಹ ಜೀವಿತವನ್ನು ತೊರೆದು ಹೊರಗೆ ಬರುವುದು ಅಗತ್ಯವಾಗಿದೆ. ಹಾಗೆ ಹೊರಬರುವಾಗ ನಮ್ಮ ಪ್ರಯಾಣವು ದೇವರ ನಿವಾಸದ ಕಡೆ ತೆರಳುವುದು ಮುಖ್ಯವಾದುದು. ಯೌವನಸ್ಥರೇ, ಇಂದು ನೀವು ವಾಸಿಸುತ್ತಿರುವುದು ದೇವರ ಮನೆಯಾಗಿದೆಯೋ ಎಂದು ಖಚಿತಪಡಿಸಿಕೊಳ್ಳಿ. ನಿಮ್ಮ ಜೀವಿತದ ನೆಲೆಯು ಅಧರ್ಮದ್ದೋ ಅಥವಾ ದೇವರ ನೀತಿಯ ಮೇಲೆ ನೆಲೆಗೊಂಡಿರುವುದೋ ತಿಳಿಯುವುದು ಅವಶ್ಯವಾದದ್ದು. ದೇವರ ಮನೆಯಾಗಿಲ್ಲದಿದ್ದಲ್ಲಿ—ಅಧರ್ಮದ ನೆಲೆಯಾಗಿದ್ದಲ್ಲಿ, ಆ ಕಿರಿಯ ಮಗನು ಯಾವ ರೀತಿಯಲ್ಲಿ ತನ್ನ ಜೀವಿತದ ನೆಲೆಯು ಅಧರ್ಮದ್ದು, ದೇವರಿಂದ

ದೂರವಾದದ್ದು ಎಂದು ಅರಿತು ಮಾನಸಾಂತರಪಟ್ಟವನಾಗಿ, ತನ್ನ ತಂದೆಯ ಮನೆಗೆ ಹಿಂದಿರುಗಿದ ರೀತಿಯಲ್ಲಿ, ನೀವೂ ಕೂಡ ಅದನ್ನರಿತು, ತಂದೆಯ ಮನೆಗೆ— ದೇವರ ನಿವಾಸಕ್ಕೆ— ಹಿಂದಿರುಗುವುದು ಅತಿ ತುರ್ತಿನ ಹಾಗೂ ಪ್ರಾಮುಖ್ಯವಾದ ಸಂಗತಿಯಾಗಿದೆ, ಇದನ್ನು ಹೇಗೆ ನಿರ್ಧರಿಸುವುದು ? ಈಗ ನೀವು ಜೀವಿಸುತ್ತಿರುವ ಮನೆಯು ದೇವರ ವಾಕ್ಯಕ್ಕನುಸಾರವಾಗಿದೆಯೋ ? ತಂದೆ, ಮಗ, ನಿತ್ಯಜೀವ, ದೇವರ ರಾಜ್ಯ, ಪುನರುತ್ಥಾನ, ಕ್ರಿಸ್ತನ ಹಿಂದಿರುಗುವಿಕೆ, ಮರಣ, ಸತ್ತವರ ಸ್ಥಿತಿ ಈ ಲೋಕದಲ್ಲಿ ದೇವರ ರಾಜ್ಯದ ಸ್ಥಾಪನೆ, ಪಾಪದ ಮೂಲ, ಮುಂತಾದ ವಿಷಯಗಳಲ್ಲಿ ದೇವರ ವಾಕ್ಯವು ಏನು ತಿಳಿಸುತ್ತದೆ ಮತ್ತು ಸಭಾ ಬೋಧಕರು ಏನು ತಿಳಿಸುತ್ತಾರೆ ಎಂಬುದನ್ನು ಅರಿಯುವುದು ಬಹು ಮುಖ್ಯವಾದದ್ದು. ಇದನ್ನು ಅರಿಯದಿದ್ದ ಪಕ್ಷದಲ್ಲಿ ನಿಮ್ಮ ನಂಬಿಕೆಯಿಂದಾಗುವ ಪ್ರಯೋಜನವೇನು ? ಪ್ರಿಯ ಯೌವನಸ್ಥರೇ, ತಂದೆಯಿಂದ ದೂರವಾದ ಜೀವಿತವನ್ನು ಸಾಗಿಸುತ್ತಿದ್ದ ಈ ಯೌವನಸ್ಥನು ತಂದೆಯ ಮನೆಯಲ್ಲಿ ಜೀವಿಸುವುದೇ ಉತ್ತಮವಾದುದೆಂದು ಅರಿತನಲ್ಲದೆ ತಂದೆಯನ್ನು ಬಿಟ್ಟು ಬಾಳುವ ಜೀವಿತವು ಸರಿಯಾದುದಲ್ಲವೆಂದು ಕಂಡುಕೊಂಡನು. ಹೀಗೆ ದೇವರ ವಾಕ್ಯಗಳಿಗೆ ಸರಿಯಾದ ಬೋಧನೆಗಳಿಂದ ಸತ್ಯವನ್ನು ಅರಿತು ಅದರ ಮೂಲಕ ಜೀವಿಸುವುದು ನಿತ್ಯ ಜೀವನವನ್ನು ಹೊಂದಲು ಮಾರ್ಗವಾಗುತ್ತದಲ್ಲವೇ ?

ನಾವು ವಾಸಿಸುವ ಮನೆಯು ಬಂಡೆಯ ಮೇಲೆ ಕಟ್ಟಲ್ಪಟ್ಟಿದೆಯೋ ಇಲ್ಲವೇ ಮರಳಿನ ಮೇಲೆ ಕಟ್ಟಲ್ಪಟ್ಟಿದೆಯೋ ಎಂದು ತಿಳಿಯಬೇಕು. ದೇವರ ವಾಕ್ಯಗಳ ಆಧಾರವಿಲ್ಲದೆ ಕಟ್ಟಲ್ಪಟ್ಟಿರುವ ಅನೇಕ ಸಭೆಗಳು ಲೋಕದಲ್ಲಿವೆ. ಅಂತಹವುಗಳಲ್ಲಿ ನಾವಿರುವುದಾದರೆ, ಅವು ಕುಸಿದು ಬೀಳುತ್ತವೆ. ಯೇಸುಕ್ರಿಸ್ತನು ಹೇಳಿದ್ದು— "ಆದರೆ ನನ್ನ ಮಾತುಗಳನ್ನು ಕೇಳಿಯೂ ಅವುಗಳಂತೆ ನಡೆಯದ ಪ್ರತಿಯೊಬ್ಬನು ಉಸುಬಿನ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಹೀನ ಮನುಷ್ಯನನ್ನು ಹೋಲುವನು" (ಮತ್ತಾಯ 7;26). ಪ್ರತಿಯೊಬ್ಬರೂ ಯಾವುದಾದರೊಂದು ಮನೆಯಲ್ಲಿ ವಾಸ ಮಾಡುವವರೇ ಆಗಿರುತ್ತಾರೆ. ಆದರೆ ತಾವು ವಾಸ ಮಾಡುವ ಮನೆಯ ಅಂತ್ಯಸ್ಥಿತಿ ಏನಾಗುತ್ತದೆ ಎಂಬುದನ್ನು ತಿಳಿಯಬೇಕು. ಮನೆಗೆ ಅಸ್ತಿವಾರವು ಬಹು ಮುಖ್ಯವಾದುದು, ಅದನ್ನೇ ಅಲಕ್ಷಿಸಿದರೆ ಅದರ ಮೇಲೆ ಕಟ್ಟಿರುವ ಮನೆಯು ಹಾಳಾಗಿಹೋಗುವುದು ನಿಶ್ಚಯ. ಇದರಂತೆ ಸಭೆಗಳು ದೇವರಿಂದ ದೊರಕುವ ಸತ್ಯವಾಕ್ಯಗಳ ಅಸ್ತಿವಾರದ ಮೇಲೆ ಸ್ಥಾಪಿತವಾಗಿರಬೇಕು ಎಂಬುದನ್ನು ನಾವು ಜ್ಞಾಪಕದಲ್ಲಿಡಬೇಕು. ದೇವರು ನಿರ್ಮಿಸಿರುವ ಮನೆಯು ಯಾವ ಅಸ್ತಿವಾರವನ್ನು ಹೊಂದಿದೆ ? ಪೌಲನು ಹೇಳುತ್ತಾನೆ, "ಅಪೋಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ ನೀವು ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ," (ಎಫೆಸ 2;20) ಈ ರೀತಿಯಾಗಿ ಅಪೋಸ್ತಲರ ಹಾಗೂ ಪ್ರವಾದಿಗಳ ಬೋಧನೆಗಳೆಂಬ ಅಸ್ತಿವಾರದ ಮೇಲೆ ಕಟ್ಟಲ್ಪಡದ ಯಾವ ಸಭೆಯೂ ಉಳಿಯದೆ ನಾಶನಕ್ಕೀಡಾಗುವುದು. ಆದ್ದರಿಂದ ನಂಬಿ ಜೀವಿಸಲು ಇರುವ ಮನೆ ಎಂಥದು ಎಂದು ನಿರ್ಲಕ್ಷಿಸದೆ,

ಪರಿಶೀಲಿಸಿ, ಅದು ಸತ್ಯದಿಂದ ಕೂಡಿರದಿದ್ದರೆ, ಅದನ್ನು ತೆರೆದು ತ್ವರೆಯಾಗಿ ಹೊರ ಬರುವುದು ಸೂಕ್ತವಾದುದು, ನಾಶನವು ಬರುವ ಮೊದಲೇ ಜಾಗ್ರತರಾಗಿ, ಕ್ಷೇಮಕರವಾದ ಹಾಗೂ ಬದುಕುವ ಸ್ಥಳಕ್ಕೆ ಹೋಗಲು ನಿರ್ಧರಿಸಿ.

ಜ್ಞಾನಿಯು ತಿಳಿಸುವಂತೆ ಮನೆಯನ್ನು ಕಟ್ಟಲು ಜ್ಞಾನ ವಿವೇಕಗಳು ಬೇಕು. ಅವಶ್ಯಕವಾಗಿಯೇ ದೇವರು ತನ್ನ ಜನರಾದ ಅಪೊಸ್ತಲರು ಮತ್ತು ಪ್ರವಾದಿಗಳಿಗೆ ತನ್ನ ವಾಕ್ಯಗಳನ್ನು ಅನುಗ್ರಹಿಸಿ ಅಸ್ತಿವಾರವನ್ನು ಹಾಕಿರುವನು. "ಮನೆಯನ್ನು ಕಟ್ಟುವುದಕ್ಕೆ ಜ್ಞಾನವೇ ಸಾಧನ ; ಅವನ್ನು ಸ್ಥಿರಪಡಿಸುವುದಕ್ಕೆ ವಿವೇಕವೇ ಆಧಾರ, ಅದರ ಕೋಣೆಗಳನ್ನು ಅಮೂಲ್ಯವಾದ ಎಲ್ಲಾ ನಷ್ಟ ಸಂಪತ್ತಿನಿಂದ ತುಂಬಿಸುವದಕ್ಕೆ ತಿಳುವಳಿಕೆಯೇ ಸಾಧನ." (ಜ್ಞಾನೋಕ್ತಿ 24:23). ದೇವರ ಮನೆಯು ಆತನ ಸಭೆಯೇ ಆಗಿರುವದರಿಂದ, ಪ್ರತಿಯೊಬ್ಬರೂ ತಾವು ಯಾವ ಸಭೆಯಲ್ಲಿ ಇದ್ದಾರೆಂಬುದನ್ನು ತಿಳಿಯುವುದು ಪ್ರಥಮ ಕಾರ್ಯವಾಗಿದೆ. "ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ. ಆ ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ." (1 ತಿಮೋಥೆ 3:15). ಸತ್ಯವು ಇಲ್ಲದ ಸಭೆಯು ಮಾನವನಿಗೆ ಯಾವ ಆಸರೆಯನ್ನೂ ದೊರಕಿಸದು.

ಯೇಸುಕ್ರಿಸ್ತನು ಸಾಮ್ಯರೂಪದಲ್ಲಿ ಬೋಧಿಸಿದ ಆ ಯೌವನಸ್ಥನು ಎಸಗಿದ ಕಾರ್ಯಗಳು ಇಂದಿನ ಯುವಕ ಯುವತಿಯರಿಗೆ ಹೆಚ್ಚಿನ ತಿಳುವಳಿಕೆಯನ್ನು ಪ್ರಕಾಶಕ್ಕೆ ತರುವುದನ್ನು ಕಾಣಬಹುದು. ದೇವರ ಅನ್ಯೋನ್ಯತೆಯ ಅಗಲುವಿಕೆ, ತಂದೆಯ ಆಸ್ತಿಯನ್ನು ಪೋಲು ಮಾಡುವುದು, ಹುಡುಗತನದ ಜೀವಿತ, ದುರ್ಜನರ ಸಹವಾಸ, ತಾನು ಆರಿಸಿಕೊಂಡು, ಜೀವಿಸುತ್ತಿದ್ದ ದೇಶದಲ್ಲಿ ಕ್ಷಾಮ ತಲೆದೋರಿ ನಿರ್ಗತಿಕನಾಗುವುದು, ಆಹಾರವನ್ನು ಯಾರು ಒದಗಿಸದಿರುವುದು—ಇವುಗಳಿಂದ ಕಲಿಯತಕ್ಕ ಪಾಠವು ಬಹಳವಿದೆ. ದೇವರ ಆಶ್ರಯದಿಂದ ದೂರ ಹೋಗುವವನು ಅನೇಕ ರೀತಿಯಲ್ಲಿ ತನ್ನನ್ನು ತಾನೇ ಕಷ್ಟಗಳಿಗೆ ಗುರಿಪಡಿಸಿಕೊಳ್ಳುತ್ತಾನೆ ಎಂಬುದನ್ನು ಕಾಣಬಹುದು. ಈ ಯೌವನಸ್ಥನನ್ನು ದೇವರ ಬಳಿಯಿಂದ ದೂರ ಹೋಗುವಂತೆ ಬೇರೆ ಯಾರೂ ಪ್ರೇರೆಪಿಸಲಿಲ್ಲ. ತಾನೇ ತಂದೆಗೆ ತನ್ನ ಅಭಿಲಾಷೆಯನ್ನು ತಿಳಿಸಿ, ಹೊರಟು ಹೋದನು. ಈತನು ತಂದೆಯಿಂದ ಅಗಲಿ ಹೋಗಲು, ತಂದೆಯ ಮನೆಯಲ್ಲಿ ಈತನಿಗೆ ಯಾವ ತೊಂದರೆ ಕಷ್ಟಗಳಿರಲಿಲ್ಲ. ಏಕೆಂದರೆ ಈತನು ಹಂದಿಗಳನ್ನು ಮೇಯಿಸುವಾಗ ಯೋಚಿಸಿದ್ದ ಸಂಗತಿಯನ್ನು ಗಮನಿಸಿದಲ್ಲಿ, ತನ್ನ ತಂದೆಯ ಮನೆಯ ಐಶ್ವರ್ಯ, ಸುಖ ಸಂತೋಷಗಳ ಬಗ್ಗೆ ಆತನು ಯೋಚಿಸಿರುತ್ತಾನೆ. ಇದರಿಂದ ನಾವು ತಿಳಿಯುವುದೇನು ? ತಂದೆಯು ನಮಗಾಗಿ ಒದಗಿಸಿರುವ ಎಲ್ಲಾ ಸೌಕರ್ಯಗಳನ್ನು ತಾತ್ಸಾರ ಮಾಡಿ, ನಾವಾಗಿಯೇ ಉದ್ದೇಶ ಪೂರ್ವಕವಾಗಿ ಆತನಿಂದ ದೂರ ಸರಿದು ಕಷ್ಟಗಳಲ್ಲಿ ಸಿಕ್ಕಿಕೊಂಡು ನರಳುವವರಾಗುತ್ತೇವೆ. ನಮ್ಮ ಅಕ್ರಮಗಳಿಂದ, ನಮ್ಮ ಅಜಾಗರೂಕತೆಯಿಂದ, ಉಂಟಾಗುವ ಕಷ್ಟನಷ್ಟಗಳಿಗೆ ದೇವರನ್ನು ಹೊಣೆಮಾಡುವುದು ಮಾನವನ

ಸ್ವಭಾವವಾಗಿದೆ. ದೇವರು ಸೃಷ್ಟಿದ್ದಕ್ಕೆ ಎಂದಿಗೂ ಕಾರಣನಲ್ಲ ಎಂಬುದನ್ನು ನಾವು ಮನಗಾಣಬೇಕು, ನಾವು ಪಟಿಂಗತನದ ಜೀವಿತ ನಡೆಸಲು ದೇವರು ಕಾರಣನಲ್ಲ ವೆಂಬುದನ್ನು ಅರಿತು, ನಮ್ಮ ಜೀವಿತವನ್ನು ಹೊಸತು ಮಾಡಿಕೊಳ್ಳಲು ಆತನ ಮಗನ ಬಳಿಗೆ ಬರುವುದು ಸೂಕ್ತವಾದದ್ದಾಗಿದೆ. ಲೋಕದಲ್ಲಿ ನಮ್ಮ ಜೀವನವು ಶುದ್ಧ ವಾಗಿರಲು ದೇವರು ಒದಗಿಸಿರುವ ಆಶ್ರಯವು ಯೇಸುಕ್ರಿಸ್ತನಲ್ಲದೆ ಬೇರೊಬ್ಬನಲ್ಲಿಲ್ಲ "ಬೇರೆ ಯಾವ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವುದಿಲ್ಲ ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿ ನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ." (ಅ.ಕೃ. 4:12).

ನಮ್ಮ ಕುಯುಕ್ತಿಗಳಿಂದ ಉಂಟಾಗುವ ಎಲ್ಲಾ ಹಾನಿಯಿಂದಲೂ ದೇವರು ನಮ್ಮನ್ನು ಬಿಡುಗಡೆ ಮಾಡಲು ಸದಾ ಸಿದ್ಧವಾಗಿರುವನು. ಅದನ್ನರಿತು ನಾವು ಆದರಲ್ಲಿ ಸೇರುವುದಾದರೆ ಮಾತ್ರ ಜೀವದಿಂದುಳಿಯಲು ಸಾಧ್ಯ. ಜಲಪ್ರಳಯದ ಕಾಲದಲ್ಲಿ ದೇವರು ನಾವೆಯನ್ನು ಏರ್ಪಡಿಸಿದನು. ಎಂಟು ಜನರ ಹೊರತಾಗಿ, ಲೋಕದ ಸರ್ವಜನರೂ ದೇವರ ಆಶ್ರಯವನ್ನು ತಾತ್ಸಾರ ಮಾಡಿ, ತಮ್ಮದೇ ಆದ ಆಶ್ರಯ ಗಳಲ್ಲಿ ಭರವಸೆಯಿಟ್ಟರು. ಆದರೆ ಅವರು ಆತುಕೊಂಡಿದ್ದ ಆಶ್ರಯಗಳು ಅವರನ್ನು ಎಷ್ಟು ಕಾಲ ಸುರಕ್ಷಿಸಿದರು ಎಂಬುದನ್ನು ನಾವು ಯೋಚಿಸುವುದಾದರೆ, ನಮ್ಮ ಆಶ್ರಯ ಸ್ಥಾನಗಳಲ್ಲಿ ನಾವು ಭರವಸೆಯಿಡುವುದಾದರೆ, ನಾಶವಾಗುವುದು ಖಂಡಿತ ಎಂಬುದನ್ನು ಅರಿಯುತ್ತೇವೆ. ಆದುದರಿಂದ ದೇವರ ವಾಕ್ಯವು ನಮಗೆ ತಿಳಿಸುವ ಸುಖ ಸಂದೇಶದ ಕಡೆಗೆ ನಾವು ಕಿವಿಗೊಟ್ಟು, ಆತನ ಆಶ್ರಯವು ನಮಗೆ ಹೇಗೆ ಜೀವ ದೊರಕಿಸುತ್ತದೆಂಬುದನ್ನು ಅರಿಯಲು ಇಂದಿನಿಂದಲೇ ನಿಶ್ಚಯಿಸೋಣ, ನಮ್ಮ ಸಮಯದ ಸ್ವಲ್ಪ ಭಾಗವನ್ನು ಆತನ ವಾಕ್ಯವನ್ನು ತಿಳಿಯಲು ಉಪಯೋಗಿಸೋಣ ದೇವರು ನಮ್ಮ ಮೇಲೆ ತನ್ನ ಮಹಾ ಪ್ರೀತಿಯನ್ನು ತೋರಿಸುವವನಾಗಿಯೇ ಇದ್ದಾನೆ "ನನ್ನನ್ನು ತೊರೆದು ಮನಸ್ಸು ಬಂದ ಹಾಗೆ ದುರ್ಮಾರ್ಗದಲ್ಲಿ ನಡೆಯುವ ಜನರನ್ನು ನಾನು ದಿನವೆಲ್ಲಾ ಕೈ ಚಾಚಿ ಕರೆದೆನು," (ಯೆಶಾಯ 65:2). ಪ್ರಿಯ ಯುವಕ ಯುವತಿಯರೇ, ನಮ್ಮ ಬಾಳ್ವೆಯು ದೇವರ ದೃಷ್ಟಿಯಲ್ಲಿ ಹೇಗಿದೆ ಎಂಬುದನ್ನು ತಿಳಿಯಲು ಸತ್ಯವೇದವೆಂಬ ಕನ್ನಡಿಯಲ್ಲಿ ನಮ್ಮನ್ನು ನೋಡಿಕೊಳ್ಳುವುದು ಆದ್ಯ ಕರ್ತವ್ಯ ವಾಗಿದ್ದು, ಅದು ನಮ್ಮಲ್ಲಿರುವ ಎಲ್ಲಾ ದೋಷದೋಷಗಳನ್ನು ಸಂಪೂರ್ಣವಾಗಿ ಹೊರ ಪಡಿಸುತ್ತದೆ.

ನಾವು ಪ್ರತಿದಿನವೂ ದೇವರ ವಾಕ್ಯಗಳನ್ನು ಓದಿ, ಅಧ್ಯಯನ ಮಾಡುವುದು ಅದರಂತೆ ನಡೆಯುವುದು ದೇವರ ಇಷ್ಟಾರ್ಥವಾಗಿದೆ. ಜ್ಞಾನಿಯು ಇದನ್ನು ಚೆನ್ನಾಗಿ ಗ್ರಹಿಸಿದವನಾಗಿ ಹೀಗೆ ಹೇಳುತ್ತಾನೆ. "ಮಕ್ಕಳಿರಾ, ಈಗ ನನ್ನ ಕಡೆಗೆ ಕಿವಿಗೊಡಿರಿ ; ನನ್ನ ಮಾರ್ಗಗಳನ್ನು ಅನುಸರಿಸುವವರು ಧನ್ಯರೇ ಸರಿ" ಉಪದೇಶವನ್ನು ಕೇಳಿರಿ. ಅದನ್ನು ಬಿಡದೆ ಜ್ಞಾನವಂತರಾಗಿರಿ. ನನ್ನ ದ್ವಾರಗಳ ಬಳಿಯಲ್ಲಿ ಪ್ರತಿದಿನವೂ

15ನೇ ಪುಟ ನೋಡಿ)



# ಮಕ್ಕಳ ಪುಟ

## ಅಬ್ರಾಮನೂ ಮತ್ತು ಲೋಟನು

—ಆದಿಕಾಂಡ 13ನೇ ಅಧ್ಯಾಯ

ಪ್ರಿಯ ಮಕ್ಕಳಿರಾ.

ಹಿಂದಿನ ಸಂಚಿಕೆಯಲ್ಲಿ ದೇವರು ಅಬ್ರಾಮನನ್ನು ಕರೆದದ್ದನ್ನೂ ಆತನು ತನ್ನ ಸ್ವಂತ ಊರನ್ನು ಬಿಟ್ಟು ದೇವರು ತೋರಿಸಿದ, ತಾನೆಂದೂ ಕಾಣದಿದ್ದ ದೇಶಕ್ಕೆ ಹೋಗಿ ಸೇರಿದನೆಂದು ನಾವು ಓದಿದೆವು. ಈ ಸಂಚಿಕೆಯಲ್ಲಿ ಅಬ್ರಾಮನೊಂದಿಗೆ ಬಂದ ಅವನ ಅಣ್ಣನ ಮಗನಾದ ಲೋಟನು ಅಬ್ರಾಮನಿಂದ ಹೇಗೆ ಬೇರೆಯಾಗುತ್ತಾನೆಂದು ನೋಡೋಣ.

ಅಬ್ರಾಮನು ತನ್ನದನ್ನೆಲ್ಲಾ ತೆಗೆದುಕೊಂಡು ಹೆಂಡತಿಯಾದ ಸಾರೈಯಳನ್ನೂ ಲೋಟನನ್ನೂ ಸಂಗಡ ಕರೆದುಕೊಂಡು ಕಾನಾನ್ ದೇಶದಲ್ಲಿ ನೆಲಸಿದನು. ದೇವರು ಅಬ್ರಾಮನನ್ನೂ ಲೋಟನನ್ನೂ ಆಶೀರ್ವದಿಸಿದ್ದರಿಂದ ಅವರು ಬಹು ಐಶ್ವರ್ಯವಂತರಾದರು, ಅವರ ಕುರಿ ದನಗಳೂ ಹೆಚ್ಚಿದವು. ಕ್ರಮೇಣ ಅವರಿದ್ದ ಸ್ಥಳವು ಅವರಿಬ್ಬರ ಜೀವನಕ್ಕೆ ಸಾಲದೇ ಹೋಯಿತು, ಇದರಿಂದ ಅಬ್ರಾಮನ ದನಕಾಯುವವರಿಗೂ ಲೋಟನ ದನ ಕಾಯುವವರಿಗೂ ಜಗಳ ಹುಟ್ಟಿತು. ಅಬ್ರಹಾಮನಿಗೆ ಇದರಿಂದ ಬೇಸರವಾಯಿತು. ಎಷ್ಟಾದರೂ ಲೋಟನು ತನ್ನ ಅಣ್ಣನ ಮಗನೆಂಬ ಮಮತೆ ಇತ್ತು. ಅಬ್ರಾಮನು ಲೋಟನಿಗೆ, "ನನಗೂ ನಿನಗೂ, ನನ್ನ ದನ ಕಾಯುವವರಿಗೂ ನಿನ್ನ ದನ ಕಾಯುವವರಿಗೂ ಜಗಳವಿರಬಾರದು. ನಾವು ಸಹೋದರರಲ್ಲವೇ ? ದೇಶವೆಲ್ಲಾ ನಿನ್ನೆದುರಿಗೆ ಇದೆ. ದಯವಿಟ್ಟು ನನ್ನನ್ನು ಬಿಟ್ಟು ಪ್ರತ್ಯೇಕ ಹೋಗು, ನೀನು ಎಡಗಡೆ ಹೋದರೆ, ನಾನು ಬಲಗಡೆಗೆ ಹೋಗುವೆನು ; ನೀನು ಬಲಗಡೆ ಹೋದರೆ ನಾನು ಎಡಗಡೆಗೆ ಹೋಗುವೆನು" ಎಂದು ಹೇಳಿದನು, ಲೋಟನು ಬೆಟ್ಟದ ಮೇಲಿಂದ ನೋಡಲಾಗಿ, ಯೋರ್ದನ್ ಹೊಳೆಯ ಸುತ್ತಲಿನ ಪ್ರದೇಶವು ರಮ್ಯವಾಗಿ ಅಚ್ಚ ಹಸುರಾದ ಪ್ರದೇಶವಾಗಿ ಕಂಡಿತು, ಅದೊಂದು ಸುಂದರ ಉದ್ಯಾನವನವಾಗಿ ಕಾಣಿಸಿತು, ಲೋಟನು ಅಲ್ಲಿ ವಾಸಿಸಲು ನಿರ್ಧರಿಸಿದನು, ಹೀಗೆ ಲೋಟನು ಅಬ್ರಾಮನನ್ನು ಬಿಟ್ಟು ಪ್ರತ್ಯೇಕವಾದರೂ ಅಬ್ರಾಮನು ಅಲ್ಲಿಯೇ ಬೆಟ್ಟಗಳ ತಪ್ಪಲಿನಲ್ಲಿಯೇ ಉಳಿದುಕೊಂಡನು, ಲೋಟನು ಯೋರ್ದನ್ ಹೊಳೆಯ ಸುತ್ತಲ ಪ್ರದೇಶದ ಊರುಗಳ ಸಮೀಪದಲ್ಲಿ ಗುಡಾರ ಹಾಕಿಕೊಂಡು ವಾಸಮಾಡಿದನು,

ಅಬ್ರಾಮನು ತನ್ನ ಅಣ್ಣನ ಮಗನಾದ ಲೋಟನ ಅನುಕೂಲಕ್ಕಾಗಿ ತನ್ನ ಅನುಕೂಲವನ್ನೇ ಬಿಟ್ಟುಕೊಟ್ಟನು, ಅನುಕೂಲವಾದ ಪ್ರದೇಶವನ್ನು ಆಯ್ದುಕೊಳ್ಳಲು

ಲೋಟನಿಗೇ ಮೊದಲು ಅವಕಾಶವನ್ನು ಕೊಟ್ಟನು. ಅಬ್ರಾಮನ ಈ ನಿಸ್ವಾರ್ಥ ಗುಣವನ್ನು ದೇವರು ಮೆಚ್ಚಿದನು. ಲೋಟನು ಅಬ್ರಾಮನನ್ನು ಬಿಟ್ಟು ಹೋದ ಮೇಲೆ, ದೇವರು ಅಬ್ರಾಮನೊಂದಿಗೆ ಮಾತನಾಡಿದನು. ದೇವರು ಅಬ್ರಾಮನಿಗೆ, "ನೀನಿರುವ ಸ್ಥಳದಿಂದ ಬೆಟ್ಟಗಳ ಮೇಲಿಂದ ಉತ್ತರಕ್ಕೂ, ದಕ್ಷಿಣಕ್ಕೂ, ಪೂರ್ವಕ್ಕೂ ಮತ್ತು ಪಶ್ಚಿಮಕ್ಕೂ ನೋಡು" ಎಂದು ಹೇಳಿದನು. ಅಬ್ರಾಮನು ಬೆಟ್ಟದ ಮೇಲಿಂದ ನೋಡಿದಾಗ, ಎಷ್ಟೊಂದು ದೊಡ್ಡ ಪ್ರದೇಶವಿತ್ತು. ಆಗ ದೇವರು, "ನೀನು ನೋಡುವ ಈ ದೇಶವನ್ನೆಲ್ಲಾ ನಿನಗೂ ನಿನ್ನ ಕುಟುಂಬಕ್ಕೂ ಯಾವಾಗಲೂ ಇರುವಂತೆ ಕೊಡುತ್ತೇನೆ; ನೀನು ಹೋಗಿ ಆ ದೇಶದಲ್ಲೆಲ್ಲಾ ತಿರುಗಾಡು, ಅದನ್ನೆಲ್ಲಾ ನಿನಗೆ ಕೊಡುವೆನು" ಎಂದು ಅಬ್ರಾಮನಿಗೆ ಹೇಳಿದನು.

ಅಬ್ರಾಮನು ಈಗ ಇಲ್ಲ. ಸತ್ತಿದ್ದಾನೆ. ದೇವರು ಅವನಿಗೆ ವಾಗ್ದಾನ ಮಾಡಿದಂತೆ ಆ ದೇಶವನ್ನು ಪಡೆಯಲಿಲ್ಲ. ಆದರೆ ಯೇಸುಕ್ರಿಸ್ತನು ಹಿಂದಿರುಗಿ ಈ ಲೋಕಕ್ಕೆ ಬಂದಾಗ, ಆತನು ನಂಬಿಗಸ್ತನಾದ ಅಬ್ರಾಮನನ್ನು ಪುನಃ ಬದುಕಿಸುತ್ತಾನೆ. ಆಗ ಅಬ್ರಾಮನು ತನ್ನ ದೇಶವಾದ—ಇಸ್ರಾಯೇಲ್ ದೇಶದಲ್ಲಿ, ದೇವರು ವಾಗ್ದಾನ ಮಾಡಿದಂತೆ ಎಂದೆಂದಿಗೂ ಜೀವಿಸುತ್ತಾನೆ, ಯಾಕೆಂದರೆ ದೇವರು ಯಾವಾಗಲೂ ತನ್ನ ವಾಗ್ದಾನಗಳನ್ನು ನೆರವೇರಿಸುತ್ತಾನೆ.

ಇದರಿಂದ ನಾವು ಕಲಿಯತಕ್ಕ ಪಾಠವೇನು ? ನಾವು ದೇವರ ಮಾತಿನಲ್ಲಿ ವಿಶ್ವಾಸವಿಟ್ಟು ನಂಬಿದರೆ, ದೇವರು ತನ್ನ ಮಾತನ್ನು ನೆರವೇರಿಸುತ್ತಾನೆ. ಅಲ್ಲದೆ ನಮ್ಮನ್ನು ಕಷ್ಟದಿಂದ ಪಾರುಮಾಡುತ್ತಾನೆ. —ಜೆ. ಫ್ಲಾರೆನ್ಸ್ ತಾರಾಬಾಯಿ

---

# ಮಕ್ಕಳ ದೀಪ - 9



**ಈ ಕೆಳಗಿನ ಪ್ರಶ್ನೆಗಳಿಗೆ ಸರಿಯುತ್ತರ ಬರೆದು ಕಳುಹಿಸಿ.**

1. ಅಬ್ರಾಮನೂ ಲೋಟನೂ ಕಾನಾನ್ ದೇಶದಲ್ಲಿ ಸೇರಿದ ಮೇಲೆ ಅವರ ಜೀವನದ ಸ್ಥಿತಿ ಏನಾಯಿತು ?
2. ಅಬ್ರಾಮನ ದನಕಾಯುವವರಿಗೂ ಲೋಟನ ದನಕಾಯುವವರಿಗೂ ಜಗಳವಾದದ್ದು ಏಕೆ ?
3. ಅಬ್ರಾಮನು ಲೋಟನಿಗೆ ಏನು ಹೇಳಿದನು ?
4. ಲೋಟನು ಆರಿಸಿಕೊಂಡ ಪ್ರದೇಶ ಯಾವುದು ?
5. ಅಬ್ರಾಮನು ಯಾವ ಪ್ರದೇಶವನ್ನು ಆರಿಸಿಕೊಂಡನು ?
6. ದೇವರು ಅಬ್ರಾಮನನ್ನು ಮೆಚ್ಚಿದ್ದು ಏಕೆ ?
7. ದೇವರು ಅಬ್ರಾಮನಿಗೆ ಏನು ಹೇಳಿದನು ?
8. ದೇವರು ಅಬ್ರಾಮನಿಗೆ ಮಾಡಿದ ವಾಗ್ದಾನ ಏನು ?
9. ಅಬ್ರಾಮನು ದೇವರ ವಾಗ್ದಾನದಂತೆ ಆ ದೇಶದಲ್ಲಿ ಎಂದೆಂದಿಗೂ ವಾಸಿಸಿದನೇ ?
10. ಅಬ್ರಾಮನು ಆ ದೇಶದಲ್ಲಿ ಯಾವಾಗ ಎಂದೆಂದಿಗೂ ಜೀವಿಸುತ್ತಾನೆ ?

ಯೌವನಸ್ಥರಿಗಾಗಿ (12ನೇ ಪುಟದಿಂದ)

ಕಾಯುತ್ತಾ, ಬಾಗಿಲಿನ ನಿಲುವುಗಳ ಹತ್ತಿರ ಜಾಗರೂಕನಾಗಿ ನನ್ನ ಮಾತುಗಳನ್ನು ಕೇಳುವವನು ಭಾಗ್ಯವಂತನು." (ಜ್ಞಾನೋಕ್ತಿ 8:32,34)

ನಾವು ಪಾಪಾಧೀನ ಸ್ವಭಾವವನ್ನು ತೊರೆದು, ಶರೀರಾಧೀನ ಸ್ವಭಾವಗಳಿಂದ ದೂರವಾಗಿ, ದೇವರ ಎಣಿಕೆಯಲ್ಲಿ ನಿರ್ದೋಷಿಗಳಾಗಿ ಜೀವಿಸಲು ಪ್ರಯತ್ನಿಸೋಣ, ನಮ್ಮಿಂದ ಆತನು ಅಪೇಕ್ಷಿಸುವುದು ಇದನ್ನೇ ಹೊರತು ಬೇರೇನೂ ಅಲ್ಲ. ಪ್ರಾಪಂಚಿಕವಾದ ಬಾಲಬೋಧನೆಗಳಿಂದ ದೂರವಿದ್ದು, ಕ್ರಿಸ್ತನಂತೆ ಇವುಗಳು ನಮ್ಮಲ್ಲಿ ನಾಶವಾಗಿ ನಮ್ಮ ಜೀವಿತವು ದೇವರಿಗಾಗಿಯೇ ಇರುವಂತೆ ನಡೆದುಕೊಳ್ಳುವುದು ಶ್ರೇಷ್ಠ ಸಂಗತಿಗಳಾಗಿವೆ. ಅಸತ್ಯವಾದ ಬೋಧನೆಗಳು ನಮ್ಮನ್ನು ದೇವರ ಕಡೆಗೆ ನಡೆಸಲಾರವು ಮತ್ತು ನಿತ್ಯ ಜೀವದ ಕಡೆಗೆ ಕೊಂಡೊಯ್ಯಲು ಅಸಮರ್ಥವಾಗಿವೆ ಎಂಬುದನ್ನು ನಾವು ಗಮನದಲ್ಲಿಡಬೇಕು.

ಯೌವನಸ್ಥನು ತನ್ನಲ್ಲಿದ್ದ ಭೂಸಂಬಂಧವಾದ ಸಂಗತಿಗಳನ್ನು ಬಿಡುವುದರಿಂದ ತಂದೆಯ ಬಳಿಗೆ ಬರಲು ಸಾಧ್ಯವಾಯಿತು ಎಂಬುದನ್ನು ನಾವು ಅರಿತು ಅದೇ ರೀತಿಯಲ್ಲಿ ನಾವೂ ಸಹ ಜೀವಿಸಬೇಕು. "ಆದುದರಿಂದ ನಿಮ್ಮಲ್ಲಿರುವ ಭೂಸಂಬಂಧವಾದ ಭಾವಗಳನ್ನು ಸಾಯಿಸಿರಿ, ಜಾರತ್ವ, ಬಂಡುತನ, ಕಾಮಾಭಿಲಾಷೆ, ದುರಾಶೆ, ವಿಗ್ರಹಾರಾಧನೆಗೆ ಸಮವಾಗಿರುವ ಲೋಭ. ಇವುಗಳನ್ನು ವಿಸರ್ಜಿಸಿ ಬಿಡಿರಿ." (ಕೊಲೊಸ್ಸೆ 3;5)

ದೇವರ ಪ್ರಸನ್ನತೆಯು ಯಾವಾಗ ಆತನ ಆಲಯದಲ್ಲಿ ಇರುತ್ತದೆಂಬುದನ್ನು ನೀವು ಯೋಚಿಸುತ್ತೀರೋ ? ಆತನ ಪ್ರಸನ್ನತೆಯೇ ನಮ್ಮ ಬಯಕೆಯಾಗಿದ್ದರೆ, ದೇವರಿಗೆ ಅಸಹ್ಯವಾದ ಕಾರ್ಯಗಳು ಆತನ ಸಭೆಯಲ್ಲಿ ನಡೆಯದಂತೆ ಇರಬೇಕು, ಅಲ್ಲದೆ ಆತನ ಧರ್ಮನಿಯಮಗಳು ಕಾರ್ಯಾಚರಣೆಯಲ್ಲಿರಬೇಕು. ಈ ರೀತಿಯಾಗಿರುವಂತೆ ಮನೆ ಯಾವುದೆಂದು ತಿಳಿಯುವುದೇ ನಮ್ಮ ಪ್ರಥಮ ಕಾರ್ಯವಾಗಿದೆಯೆಂಬುದನ್ನು ಯೌವನಸ್ಥರಾದ ನೀವು ಜ್ಞಾಪಕದಲ್ಲಿಡಬೇಕು. ಇಸ್ರಾಯೇಲ್ಯರು ಮೋಶೆಯ ಮುಖಾಂತರ ಕೊಡಲ್ಪಟ್ಟ ನನ್ನ ಎಲ್ಲಾ ಧರ್ಮಶಾಸ್ತ್ರ ವಿಧಿ ನ್ಯಾಯಗಳನ್ನು ಅನುಸರಿಸಿ ನಡೆಯುವುದಾದರೆ ನನ್ನ ನಾಮಮಹತ್ತು ಈ ದೇವಾಲಯದಲ್ಲಿಯೂ ಇಸ್ರಾಯೇಲ್ಯರ ಎಲ್ಲಾ ಊರುಗಳೊಳಗೆ ನನಗೆ ಇಷ್ಟವಾಗಿರುವ ಯೆರೂಸಲೇವಿನಲ್ಲಿಯೂ ಸದಾಕಾಲವಿರುವುದು." (2 ಪೂರ್ವ. ವೃ. 33;7.)

(ಮುಂದುವರೆಯುವುದು.)